## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 360 |
| ಉತ್ತರಿಸುವ ದಿನಾಂಕ | 11-12-2024 |
| ಮಾನ್ಯ ಸದಸ್ಯರ ಹೆಸರು | ಶ್ರೀ ಚಿದಾನಂದ್ ಎಂ.ಗೌಡ<br>(ಪದವೀಧರರ ಕ್ಷೇತ್ರ) |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ನೋಂದಣಿಗಾಗಿ ಇ-ಖಾತಾ ಮತ್ತು ಇ-ಆಸ್ತಿಯನ್ನು ಯಾವ ದಿನಾಂಕದಿಂದ ಕಡ್ಡಾಯ ಮಾಡಲಾಗಿದೆ. | ರಾಜ್ಯದಲ್ಲಿ ಇ-ಖಾತಾ ಸಂಬಂಧಿಸಿದಂತೆ, ಅಳವಡಿಕೆಯ ಅನುಷ್ಠಾನ ಈ ರೀತಿಯಾಗಿದೆ.<br><br>ಕೃಷಿ ಜಮೀನಿನ ನೋಂದಣಿಗೆ ಭೂಮಿ ತಂತ್ರಾಂಶದೊಂದಿಗೆ 2006 ರಿಂದಲೇ ಕಾವೇರಿ ತಂತ್ರಾಂಶವನ್ನು ಸಂಯೋಜನೆ ಮಾಡಲಾಗಿರುತ್ತದೆ.<br><br>ಜಮೀನಿನ ಸರ್ವೆ ನಕ್ಷೆ (ಸ್ಕೆಚ್)- ನಮೂನೆ-11 ಇ ಇರುವ ಮೋಜಿಣಿ ತಂತ್ರಾಂಶದೊಂದಿಗೆ ಕಾವೇರಿ ತಂತ್ರಾಂಶವನ್ನು 2016 ರಿಂದಲೇ ಸಂಯೋಜನೆ ಮಾಡಲಾಗಿದೆ.<br><br>ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೃಷಿಯೇತ್ತರ ಸ್ವತ್ತುಗಳ ದಸ್ತಾವೇಜುಗಳ ನೋಂದಣಿಗಾಗಿ ಇ-ಸ್ವತ್ತು ತಂತ್ರಾಂಶವನ್ನು ಕಾವೇರಿ ತಂತ್ರಾಂಶದೊಂದಿಗೆ 2014 ರಿಂದಲೆ ಸಂಯೋಜನೆಗೊಳಿಸಲಾಗಿದೆ.<br><br>ರಾಮನಗರ ಮತ್ತು ಕನಕಪುರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿನ ಸ್ವತ್ತುಗಳ ದಸ್ತಾವೇಜುಗಳ ನೋಂದಣಿಗಾಗಿ ಇ-ಆಸ್ತಿ ತಂತ್ರಾಂಶವನ್ನು ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಕಾವೇರಿ-2 ತಂತ್ರಾಂಶದೊಂದಿಗೆ ಪ್ರಾಯೋಗಿಕವಾಗಿ 2020 ರಿಂದಲೆ ಜೋಡಣೆ / ಸಂಯೋಜನೆ ಮಾಡಲಾಗಿದೆ.<br><br>ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಕಾವೇರಿ ತಂತ್ರಾಂಶದೊಂದಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಇ-ಆಸ್ತಿ ತಂತ್ರಾಂಶವನ್ನು ಇ-ಖಾತಾ ಪಡೆಯಲು ಪ್ರಾಯೋಗಿಕವಾಗಿ 11 ವಾರ್ಡಗಳಲ್ಲಿ 2021 ರಿಂದಲೆ ಹಾಗೂ 30 ವಾರ್ಡಗಳಲ್ಲಿ 2022 ರಿಂದಲೆ ಇ-ಖಾತಾ ಪಡೆಯಲು ಜೋಡಣೆ ಮಾಡಲಾಗಿದೆ.<br><br>ಸ್ವತ್ತುಗಳಿಗೆ ಇ-ಆಸ್ತಿ ಖಾತಾ ಇಲ್ಲದಿದ್ದಲ್ಲಿ ಅಥವಾ ನೋಂದಣಿ ಮತ್ತು ಮುದ್ರಾಂಕ ಶುಲ್ಕ ವಂಚನೆ ಮಾಡಬೇಕಿದ್ದಲ್ಲಿ ಸಾರ್ವಜನಿಕರು ಸಂಯೋಜನೆಯೇತರ ನೋಂದಣಿಯ ಮಾದರಿಯನ್ನು |

| | | |
|---|---|---|
| | | ಆಯ್ಕೆ ಮಾಡಿಕೊಂಡು ದಸ್ತಾವೇಜನ್ನು ನೋಂದಾಯಿಸಿಕೊಳ್ಳಲು ಇರುವ ಅವಕಾಶವನ್ನು ದುರುಪಯೋಗ ಪಡಿಸಿಕೊಂಡು ಕಾವೇರಿ ತಂತ್ರಾಂಶದಲ್ಲಿ ಸ್ವತ್ತಿನ ಸ್ವರೂಪವನ್ನು "ಇತರೆ" ಎಂದು ಆಯ್ಕೆ ಮಾಡಿಕೊಂಡು ಕೆಲವು ಕಛೇರಿಗಳಲ್ಲಿ ಕ್ರಮಬದ್ಧವಲ್ಲದ ಸ್ವತ್ತುಗಳ ನಕಲಿ ಖಾತೆಗಳನ್ನು ಸೃಜಿಸಿ ನೋಂದಣಿ ಮಾಡಲಾಗುತ್ತಿರುವುದು ಕಂಡು ಬಂದಿರುವುದರಿಂದ ಹಾಗೂ ಸ್ಥಿರಾಸ್ತಿಗಳಿಗೆ ಸಂಬಂಧಿಸಿದ ದಸ್ತಾವೇಜುಗಳನ್ನು ಸ್ವತ್ತನ್ನು ಗುರುತಿಸಬಲ್ಲ ವಿವರಣೆ ಇಲ್ಲದ ಹೊರತು ನೋಂದಣಿಗೆ ಸ್ವೀಕರಿಸಬಾರದೆಂದು ನೋಂದಣಿ ಕಾಯ್ದೆ 1908ರ ಕಲಂ 21ರಲ್ಲಿ ಅವಕಾಶ ಕಲ್ಪಿಸಿರುವುದರಿಂದ, ಇ-ಖಾತೆಯಲ್ಲಿ ಸ್ವತ್ತಿನ ಪಿಐಡಿ ಸಂಖ್ಯೆ ಸಂಯೋಜನೆಯಿಂದ ಲಭ್ಯವಾಗುವುದರಿಂದ ಹಾಗೂ ಮಾಹಿತಿ/ ದಾಖಲಾತಿ/ಅಧಿಕೃತ ಬಲ್ಲ ಮೂಲಗಳಿಂದ ಬರುವುದರಿಂದ ಕಾವೇರಿ-2 ತಂತ್ರಾಂಶದಲ್ಲಿ ಕೃಷಿಯೇತರ ಸ್ವತ್ತುಗಳನ್ನು ಒಳಗೊಂಡಿರುವ ದಸ್ತಾವೇಜುಗಳಿಗೆ ಕಡ್ಡಾಯವಾಗಿ ಇ-ಸ್ವತ್ತು ಅಥವಾ ಇ-ಆಸ್ತಿ ತಂತ್ರಾಂಶಗಳಿಂದ ಮಾಹಿತಿ ಪಡೆದು ನೋಂದಾಯಿಸಲು ಹಾಗೂ ಸಂಯೋಜನೆಯೇತರ ವಿಧಾನದಲ್ಲಿ ನೋಂದಣಿಯನ್ನು ನಿಲ್ಲಿಸುವ ನಿಟ್ಟಿನಲ್ಲಿ ಹಾಗೂ ಇ-ಆಸ್ತಿ ತಂತ್ರಾಂಶವನ್ನು ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಕಾವೇರಿ-2 ತಂತ್ರಾಂಶದೊಂದಿಗೆ ಸಂಯೋಜಿಸಿ ಈಗಾಗಲೇ ಜಾರಿಯಲ್ಲಿರುವ 41 ವಾರ್ಡ್‌ಗಳೊಂದಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಎಲ್ಲಾ ವಾರ್ಡ್‌ಗಳಿಗೂ ಸಹ ದಿನಾಂಕ:30/09/2024 ರಿಂದ ಹಂತ ಹಂತವಾಗಿ ಜಾರಿಗೆ ಬರುವಂತೆ ಅನುಷ್ಠಾನ ಗೊಳಿಸಲು ನಿರ್ಣಯಿಸಲಾಗಿದೆ.<br><br>ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯ ಸ್ಥಿರಾಸ್ತಿಗಳ ನೋಂದಣಿಗೆ ಇ-ಆಸ್ತಿ ತಂತ್ರಾಂಶವನ್ನು ಕಾವೇರಿ-2 ತಂತ್ರಾಂಶ ದೊಂದಿಗೆ ರಾಜ್ಯದ 4 ಜಿಲ್ಲೆಗಳನ್ನು ದಿನಾಂಕ: 09-09-2024 ರಿಂದ ಜಾರಿಗೆ ಬರುವಂತೆ ಮತ್ತು ರಾಜ್ಯದ 08 ಜಿಲ್ಲೆಗಳನ್ನು ದಿನಾಂಕ:23/09/2024ರಿಂದ ಜಾರಿಗೆ ಬರುವಂತೆ ಹಾಗೂ ಇನ್ನುಳಿದ 18 ಜಿಲ್ಲೆಗಳನ್ನು ದಿನಾಂಕ: 07/10/2024ರಿಂದ ಜಾರಿಗೆ ಬರುವಂತೆ ಆದೇಶಿಸಲಾಗಿದೆ. |
| ಆ) | ಈ ಹಿಂದೆ ಗ್ರಾಮ ಪಂಚಾಯಿತಿ/ ಪುರಸಭೆಯಲ್ಲಿ ಬಿ-ಖಾತಾ ದಾಖಲಾಗಿರುವ ಸ್ವತ್ತುಗಳಿಗೆ (ಕಂದಾಯ ನಿವೇಶನಗಳಿಗೆ) ನಗರ ಸ್ಥಳೀಯ ಸಂಸ್ಥೆಗಳು ಇ-ಆಸ್ತಿ ನೀಡದ ಕಾರಣ ಸದರಿ ಆಸ್ತಿಗಳ ಖರೀದಿ ಮಾರಾಟ ಸಾಧ್ಯವಾಗದೆ | ಹೌದು.<br><br>1) ಕರ್ನಾಟಕ ಗ್ರಾಮ ಸ್ವರಾಜ ಮತ್ತು ಪಂಚಾಯತ್ ರಾಜ್ ಅಧಿನಿಯಮ-1993ರ ಪ್ರಕರಣ 302 ಪ್ರಕಾರ ಈ ಹಿಂದೆ ಗ್ರಾಮಪಂಚಾಯತಿಯಲ್ಲಿ ನಮೂನೆ-11 ಬಿ ತೆರಿಗೆ ನಿರ್ಧರಣೆ ಪಟ್ಟಿ ದಾಖಲಾಗಿರುವ ಸ್ವತ್ತುಗಳಿಗೆ ನಗರ ಸ್ಥಳೀಯ ಸಂಸ್ಥೆಗಳು ಇ-ಆಸ್ತಿ ತಂತ್ರಾಂಶದ ಮೂಲಕ ನಮೂನೆ-3ನ್ನು ವಿತರಿಸಬೇಕಾಗಿರುತ್ತದೆ. ಗ್ರಾಮ ಪಂಚಾಯತಿಯು ನಗರ ಸ್ಥಳೀಯ ಸಂಸ್ಥೆಯಾಗಿ ಪರಿವರ್ತನೆಯಾದ ನಂತರ ಇ-ಸ್ವತ್ತು |

| | | |
|---|---|---|
| | ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಇದರ ಪರಿಹಾರಕ್ಕೆ ಸರ್ಕಾರ ಕೈಗೊಂಡ ಕ್ರಮವೇನು; | ತಂತ್ರಾಂಶದ ಮೂಲಕ ಆಸ್ತಿಗಳಿಗೆ ನಮೂನೆ-11 ಬಿ ವಿತರಿಸುವಲ್ಲಿ ಅವಕಾಶವಿರುವುದಿಲ್ಲ.<br><br>2) ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿನ ಅನಧಿಕೃತ ನಿವೇಶನಗಳಿಗೆ ಮತ್ತು ಕಟ್ಟಡಗಳನ್ನು (ಸರ್ಕಾರಿ/ ಸ್ಥಳೀಯ ಸಂಸ್ಥೆಗಳ ಭೂಮಿಯನ್ನು ಹೊರತುಪಡಿಸಿ) ತೆರಿಗೆ ವ್ಯಾಪ್ತಿಗೆ ಒಳಪಡಿಸಿ, ಪ್ರತ್ಯೇಕ ವಹಿಯಲ್ಲಿ ದಾಖಲಿಸಲು ಅವಕಾಶವಾಗುವಂತೆ ಕರ್ನಾಟಕ ಪೌರಸಭೆಗಳ ಅಧಿನಿಯಮ 1964 ಮತ್ತು ಕರ್ನಾಟಕ ಪೌರನಿಗಮಗಳ ಅಧಿನಿಯಮ 1976ರ ಕಾಯ್ದೆಗೆ ತಿದ್ದುಪಡಿ ತರಲಾಗಿದ್ದು. ದಿನಾಂಕ: 10-09-2024ರ ರಾಜ್ಯ ಪತ್ರದಲ್ಲಿ ಅಧಿಸೂಚಿಸಲಾಗಿದೆ. ಕಾಯ್ದೆಯ ತಿದ್ದುಪಡಿಯಂತೆ ಮಾರ್ಗಸೂಚಿ ಹೊರಡಿಸಲು ಕರ್ನಾಟಕ ಪೌರಸಭೆಗಳ (ತೆರಿಗೆ) ನಿಯಮಗಳಲ್ಲಿ ತಿದ್ದುಪಡಿ ಮಾಡಲು ಕ್ರಮವಹಿಸಲಾಗುತ್ತಿದ್ದು, ತಿದ್ದುಪಡಿಯ ನಂತರ ಅನಧಿಕೃತ ಸ್ವತ್ತುಗಳಿಗೆ ಈ ಆಸ್ತಿ ತಂತ್ರಾಂಶದಲ್ಲಿ ನಮೂನೆ-3 ನೀಡಲು ಕ್ರಮ ವಹಿಸಲಾಗುತ್ತದೆ. |
| ಇ) | ನೋಂದಣಿಯ ಸಮಯದಲ್ಲಿ ನೋಂದಣಾಧಿಕಾರಿಗಳು ಪರಿಶೀಲಿಸಬೇಕಾದ ದಾಖಲೆಗಳು ಯಾವುವು: | ನಿಯಮಗಳಂತೆ ನಿವೇಶನಗಳ ನೋಂದಣಿಗೆ ನಿಗಧಿಪಡಿಸಿರುವ ಅಗತ್ಯವಾದ ದಾಖಲೆ ಗಳನ್ನು ಪಕ್ಷಕಾರರು ದಸ್ತಾವೇಜುಗಳ ಹಾಜರು ಪಡಿಸಿದ್ದಲ್ಲಿ ಅಂತಹ ದಸ್ತಾವೇಜುಗಳನ್ನು ನೋಂದಾಯಿಸಲಾಗುತ್ತಿದ್ದು. ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸ್ವತ್ತುಗಳಿಗೆ ಸಂಬಂಧಿಸಿದ ದಸ್ತಾವೇಜುಗಳನ್ನು ಸರ್ಕಾರದ ಸುತ್ತೋಲೆ ಸಂಖ್ಯೆ:ಕಂಇ 06 ಮುನೋಮು 2013, ದಿನಾಂಕ:18-07-2014 ರಂತೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸ್ವತ್ತುಗಳಿಗಾಗಿ ಇರುವ ಇ-ಸ್ವತ್ತು ತಂತ್ರಾಂಶದಿಂದ ಮಾಹಿತಿ ಪಡೆದು ನೋಂದಾಯಿಸಲಾಗುತ್ತಿದೆ. |
| ಈ) | ಸರ್ಕಾರ ನೋಂದಣಿಗೆ ಇ-ಖಾತಾ/ಇ-ಆಸ್ತಿ ಕಡ್ಡಾಯ ಮಾಡಿದ್ದರೂ ಸಹ ನಿಯಮ ಬಾಹಿರವಾಗಿ ಇ-ಖಾತಾ ಪಡೆಯದೆ ಅಥವಾ ನಕಲಿ ಇ-ಖಾತಾ ಆಧಾರದ ಮೇಲೆ ನೋಂದಣಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ನಿಯಮಾಬಾಹಿರವಾಗಿ ನೋಂದಣಿಯಾಗಿರುವ ಕ್ರಯಪತ್ರವನ್ನು ರದ್ದುಪಡಿಸಲು ಅನುಸರಿಸುವ ವಿಧಾನ ಯಾವುದು: (ಸಂಬಂಧಪಟ್ಟ ಸುತ್ತೋಲೆ | ನೋಂದಣಿಗೆ ಇ-ಖಾತಾ/ಇ-ಆಸ್ತಿ ಕಡ್ಡಾಯ ಮಾಡಿದ್ದರೂ ಸಹ ನಿಯಮ ಬಾಹಿರವಾಗಿ ಇ-ಖಾತಾ ಪಡೆಯದೆ ನೋಂದಣಿ ಆಗಿರುವುದು ಗಮನಕ್ಕೆ ಬಂದಿದ್ದು ಅವರುಗಳ ವಿರುದ್ಧ ನಿಯಮಾನುಸಾರ ಶಿಸ್ತುಕ್ರಮ ಕೈಗೊಳ್ಳಲಾಗುವುದು. ಇ-ಖಾತವಿಲ್ಲದೇ ನೋಂದಣಿ ಮಾಡದಂತೆ ಕಾವೇರಿ 2.0 ಸಾಫ್ಟ್‌ವೇರ್‌ನಲ್ಲಿ ನಿರ್ಬಂಧಿಸಲಾಗಿದೆ. ನಕಲಿ ಇ-ಖಾತಾ ಆಧಾರದ ಮೇಲೆ ನೋಂದಣಿ ಮಾಡುತ್ತಿರುವ ಬಗ್ಗೆ ಯಾವುದೇ ಮಾಹಿತಿಯು ಬಂದಿರುವುದಿಲ್ಲ. ಬಂದಿದ್ದಲ್ಲಿ ಸಂಬಂಧಪಟ್ಟ ಇಲಾಖೆ ಕ್ರಮವಹಿಸುತ್ತದೆ. |

| | | |
|---|---|---|
| | ಅಥವಾ ಕಾಯ್ದೆಯ ಪ್ರತಿಯನ್ನು ನೀಡುವುದು) | |
| ಉ) | ನಿಯಮಬಾಹಿರವಾಗಿ ನೋಂದಣಿ ಮಾಡಿದ ಅಧಿಕಾರಿಗಳ ಮೇಲೆ ಕೈಗೊಂಡ ಕ್ರಮಗಳೇನು; | ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957 ರಡಿಯಲ್ಲಿ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು. |
| ಊ) | ಸಕಾಲದಲ್ಲಿ ಇ-ಖಾತಾ ವಿತರಣೆಯಾಗದೇ ಸಾರ್ವಜನಿಕರು ತೊಂದರೆಗೆ ಒಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇದರ ಪರಿಹಾರಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ವ್ಯಾಪ್ತಿಯಲ್ಲಿನ ಅಧಿಕೃತ ಸ್ವತ್ತುಗಳಿಗೆ ಇ-ಖಾತೆ ನೀಡಲು ಕಾಲ ವಿಳಂಬವಾಗಿರುವುದಿಲ್ಲ. ಸ್ವತ್ತಿನ ಮಾಲೀಕರು ಅಗತ್ಯ ದಾಖಲೆಗಳನ್ನು ಸಲ್ಲಿಸಿ, 07 ದಿನಗಳ ಒಳಗಾಗಿ ತಂತ್ರಾಂಶದ ಮೂಲಕ ಸೃಜಿಸಿದ ನಮೂನೆ-3 ನ್ನು ಪಡೆಯಬಹುದಾಗಿದೆ.<br>ಪೌರಾಡಳಿತ ನಿರ್ದೇಶನಾಲಯದ ಸುತ್ತೋಲೆ ದಿನಾಂಕ: 01-08-2023 ರಲ್ಲಿ ನಮೂನೆ-3 ಕೋರಿ ಸ್ವೀಕೃತವಾಗುವ ಅರ್ಜಿಗಳನ್ನು ನಿಗದಿತ ಕಾಲಮಿತಿ 07 ದಿನಗಳ ಒಳಗಾಗಿ ವಿಲೇಪಡಿಸಲು ಸೂಚಿಸಲಾಗಿದೆ. ವಿಳಂಬ ತಪ್ಪಿಸಲು ಕಾರ್ಯಹರಿವಿನಲ್ಲಿ ಹಂತಗಳನ್ನು ಕಡಿಮೆ ಮಾಡಲಾಗಿದೆ. First in First out ಮಾದರಿಯನ್ನು ಅಳವಡಿಸಲಾಗಿದೆ. |

ಕಂಇ/220/ಎಂಎನ್ಎಸ್ಎ/2024

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು